ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೃಷ್ಣಾ ಮೇಲ್ದಂಡೆ ಯೋಜನೆಯಡಿ ನಿರ್ಮಿಸಲಾಗಿರುವ ಪುನರ್ವಸತಿ ಕೇಂದ್ರಗಳಲ್ಲಿ ನಾಗರೀಕ ಹಾಗೂ ಮೂಲಭೂತ ಸೌಕರ್ಯಗಳಿಗೆ (Civic amenities) ಮೀಸಲಿಟ್ಟ ಮತ್ತು ಆ ಉದ್ದೇಶಕ್ಕೆ ಬಳಕೆಯಾಗದೇ ಇರುವ ಕೃಷ್ಣಾ ಭಾಗ್ಯ ಜಲ ನಿಗಮದ ಜಮೀನನ್ನು ವಿವಿಧ ಸರ್ಕಾರಿ ಇಲಾಖೆಗಳಿಗೆ ಹಸ್ತಾಂತರಿಸುವ ಕುರಿತು

*****

ಓದಲಾಗಿದೆ:
1) ಪತ್ರಸಂಖ್ಯೆ:ವ್ಯನಿ/104ನೇ ನಿರ್ದೇಶಕ ಮಂಡಳಿ/ಸ.ಇಂ/119/2017-18/47 ದಿನಾಂಕ:03/04/2017.
2) ಪತ್ರಸಂಖ್ಯೆ:ವ್ಯನಿ/104ನೇ ನಿರ್ದೇಶಕ ಮಂಡಳಿ/ಸ.ಇಂ/119/2017-18/598 ದಿನಾಂಕ:16/05/2017.
3) ಪತ್ರ ಸಂಖ್ಯೆ:ಪ್ರವ್ಯ(ಆ)/ಸ.ಇಂ/28(119/2016-17)2018-19/3149 ದಿನಾಂಕ:13/11/2018.

ಪ್ರಸ್ತಾವನೆ:

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಮೇಲೆ ಓದಲಾದ ಕ್ರಮಸಂಖ್ಯೆ (1)ರ ಪತ್ರದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಬಾಧಿತರಾದ ಬಾಗಲಕೋಟೆ ತಾಲ್ಲೂಕಿನ ಕಲಾದಗಿ ಗ್ರಾಮ ಸಂತ್ರಸ್ಥರಿಗೆ ಪುನರ್ವಸತಿ ಕೇಂದ್ರವನ್ನು ನಿರ್ಮಿಸಿ, ಪುನರ್ವಸತಿ ಕೇಂದ್ರಕ್ಕೆ ಅಗತ್ಯ ನಾಗರೀಕ ಹಾಗೂ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿ ಸೂಕ್ತ ನಿವೇಶನಗಳನ್ನು ಕಾಯ್ದಿರಿಸಲಾಗಿದ್ದು, ಕಲಾದಗಿ ಗ್ರಾಮದ ಸಂತ್ರಸ್ಥರು ಪುನರ್ವಸತಿ ಕೇಂದ್ರಕ್ಕೆ ಬೇರೆ ಜಮೀನು ಮಂಜೂರು ಮಾಡಬೇಕೆಂಬ ಬೇಡಿಕೆಯನ್ನು ಮುಂದಿಟ್ಟು, ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರ ಹೊಂದಿರುವುದಿಲ್ಲ ಎಂದು ಮತ್ತು ನಿರ್ಮಿಸಿರುವ ಪುನರ್ವಸತಿ ಕೇಂದ್ರವನ್ನು ಮೂಲ ಉದ್ದೇಶಕ್ಕೆ ಉಪಯೋಗಿಸಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ. ಆದರೆ ಅದೇ ಗ್ರಾಮಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳಿಂದ (1) ಸರ್ಕಾರಿ ಐ.ಟಿ.ಐ. ಕಾಲೇಜು, (2) ಮೊರಾರ್ಜಿ ವಸತಿ ನಿಲಯ, (3) ಪ್ರಥಮ ದರ್ಜೆ ಕಾಲೇಜು ಮತ್ತು (4) ಸರ್ಕಾರಿ ಉರ್ದು ಶಾಲೆಗಳು ನಿರ್ಮಿಸಲು ಈ ಕಲಾದಗಿ ಪುನರ್ವಸತಿ ಕೇಂದ್ರದಲ್ಲಿ ನಿವೇಶನ ಮಂಜೂರು ಮಾಡುವಂತೆ ಕೋರಿರುವುದಾಗಿ ವರದಿ ಮಾಡಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ರವರ ಓದಲಾದ ಕ್ರಮಸಂಖ್ಯೆ (3)ರ ಪತ್ರದಲ್ಲಿ ಬಾಗಲಕೋಟೆ ತಾಲ್ಲೂಕಿನ ಕಲಾದಗಿ ಗ್ರಾಮ ಸಂತ್ರಸ್ಥರಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯಡಿ ನಿರ್ಮಿಸಲಾಗಿರುವ ಪುನರ್ವಸತಿ ಕೇಂದ್ರಗಳಲ್ಲಿ ನಾಗರೀಕ ಹಾಗೂ ಮೂಲಭೂತ ಸೌಕರ್ಯಗಳಿಗೆ ಮೀಸಲಿಟ್ಟ ಮತ್ತು ಆ ಉದ್ದೇಶಕ್ಕೆ ಬಳಕೆಯಾಗದಿರುವ ನಿಗಮದ ಜಮೀನನ್ನು ಈ ಕೆಳಕಂಡ ಶಾಲಾ/ಕಾಲೇಜುಗಳನ್ನು ನಿರ್ಮಿಸಲು ಸಂಬಂಧಪಟ್ಟ ಇಲಾಖೆಗಳಿಗೆ ಹಸ್ತಾಂತರಿಸಲು ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

| ಕ್ರ ಸ. | ಶಾಲಾ/ಕಾಲೇಜುಗಳ ಹೆಸರು | ವಿಸ್ತೀರ್ಣ ಎ-ಗುಂ | ಅಂದಾಜು ಚ.ಮೀ.ಗಳಲ್ಲಿ | ಮಾರ್ಗಸೂಚಿ ದರ ಪ್ರತಿ ಚ.ಮೀ.ಗೆ (ರೂಗಳಲ್ಲಿ) | ಒಟ್ಟು ಬೆಲೆ ರೂಗಳಲ್ಲಿ | ಪ್ರಚಲಿತ ಬೆಲೆಯ 2(ಎರಡು ಪಟ್ಟು) |
|---|---|---|---|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಲಾದಗಿ | 06-12 | 25495 | 900/- | 2,29,45,500 | 4,58,91,000 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಾದಗಿ | 02-16 | 9712 | 900/- | 87,40,800 | 1,74,81,600 |
| 3 | ಸರ್ಕಾರಿ ಐ.ಟಿ.ಐ. ಕಾಲೇಜು ಕಲಾದಗಿ | 03-19 | 14063 | 900/- | 1,26,56,700 | 2,53,13,400 |
| 4 | ಸರ್ಕಾರಿ ಉರ್ದು ಪ್ರೌಢಶಾಲೆ, ಕಲಾದಗಿ | 01/36 | 7689 | 900/- | 69,20,100 | 1,38,40,200 |

ಸದರಿ ಪ್ರಸ್ತಾವನೆಗೆ ದಿನಾಂಕ:16/05/2016ರಂದು ಜರುಗಿದ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದ 104ನೇ ನಿರ್ದೇಶಕರ ಮಂಡಳಿಯು ಅನುಮೋದನೆ ನೀಡಿರುತ್ತದೆ. 2017-18ನೇ ಸಾಲಿನ (ಕಳೆದ 2016-17ನೇ ಸಾಲಿನ ಮಾರ್ಗಸೂಚಿ ದರಕ್ಕೂ ಪ್ರಸ್ತುತ 2017-18ನೇ ಸಾಲಿನ ಮಾರ್ಗಸೂಚಿ ದರಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ)

ಪರಿಷ್ಕೃತ ಮಾರ್ಗಸೂಚಿ ದರಗಳ ಪಟ್ಟಿ ಪ್ರಕಾರ 16 ಪ್ರಸ್ತಾವನೆಗಳ ಪೈಕಿ ಪ್ರಸ್ತುತ 04 ಪ್ರಸ್ತಾವನೆಗಳಿಗೆ ದರ ನಿಗದಿಪಡಿಸಿ ವ್ಯವಸ್ಥಾಪಕ ನಿರ್ದೇಶಕರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ರವರು ದಿನಾಂಕ:13/11/2018ರ ಪತ್ರದಲ್ಲಿ ದಿನಾಂಕ:16/05/2016ರಂದು ಜರುಗಿದ 104ನೇ ನಿಗಮದ ನಿರ್ದೇಶಕರ ಮಂಡಳಿ ಸಭೆಯ ನಡವಳಿಯಂತೆ ಜಮೀನು ಹಸ್ತಾಂತರದ 16 ಪ್ರಸ್ತಾವನೆಗಳ ಪೈಕಿ 04 ಪ್ರಸ್ತಾವನೆಗಳಿಗೆ ಸರ್ಕಾರದ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯಲ್ಲಿನ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಕೆಳಗಿನಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 22 ಎಂಟಿಜಡ್ 2016, ಬೆಂಗಳೂರು ದಿನಾಂಕ:06/06/2019**

ಕೃಷ್ಣಾ ಮೇಲ್ದಂಡೆ ಯೋಜನೆಯಡಿಯಲ್ಲಿ ಆಲಮಟ್ಟಿ ಜಲಾಶಯದ ಹಿನ್ನೀರಿನಿಂದ ಬಾಧಿತರಾದ ಬಾಗಲಕೋಟೆ ತಾಲ್ಲೂಕಿನ ಕಲಾದಗಿ ಗ್ರಾಮ ಸಂತ್ರಸ್ಥರಿಗೆ ನಿರ್ಮಿಸಲಾಗಿರುವ ಪುನರ್ವಸತಿ ಕೇಂದ್ರಗಳಲ್ಲಿ ನಾಗರೀಕ ಹಾಗೂ ಮೂಲಭೂತ ಸೌಕರ್ಯಗಳಿಗೆ ಮೀಸಲಿಟ್ಟ ಮತ್ತು ಆ ಉದ್ದೇಶಕ್ಕೆ ಬಳಕೆಯಾಗದಿರುವ ಕೃಷ್ಣಾ ಭಾಗ್ಯ ಜಲ ನಿಗಮದ ಜಮೀನನ್ನು 2017–18ನೇ ಸಾಲಿನ ಮಾರ್ಗಸೂಚಿ ದರಗಳಿಗಿಂತ ಎರಡು ಪಟ್ಟು ಹೆಚ್ಚಿಗೆ ದರವನ್ನು ಪಡೆದು ಈ ಕೆಳಕಂಡ ವಿವಿಧ ಇಲಾಖೆಗಳಿಗೆ ಹಸ್ತಾಂತರಿಸಿ ಆದೇಶಿಸಲಾಗಿದೆ.

| ಕ್ರ ಸ. | ಶಾಲಾ/ಕಾಲೇಜುಗಳ ಹೆಸರು | ವಿಸ್ತೀರ್ಣ ಎ–ಗುಂ | ಅಂದಾಜು ಚ.ಮೀ.ಗಳಲ್ಲಿ | ಮಾರ್ಗಸೂಚಿ ದರ ಪ್ರತಿ ಚ.ಮೀ.ಗೆ (ರೂಗಳಲ್ಲಿ) | ಒಟ್ಟು ಬೆಲೆ ರೂಗಳಲ್ಲಿ | ಪ್ರಚಲಿತ ಬೆಲೆಯ 2(ಎರಡು ಪಟ್ಟು) |
|---|---|---|---|---|---|---|
| 1 | ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಲಾದಗಿ | 06–12 | 25495 | 900/– | 2,29,45,500 | 4,58,91,000 |
| 2 | ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕಲಾದಗಿ | 02–16 | 9712 | 900/– | 87,40,800 | 1,74,81,600 |
| 3 | ಸರ್ಕಾರಿ ಐ.ಟಿ.ಐ. ಕಾಲೇಜು ಕಲಾದಗಿ | 03–19 | 14063 | 900/– | 1,26,56,700 | 2,53,13,400 |
| 4 | ಸರ್ಕಾರಿ ಉರ್ದು ಪ್ರೌಢಶಾಲೆ, ಕಲಾದಗಿ | 01/36 | 7689 | 900/– | 69,20,100 | 1,38,40,200 |

ಈ ಆದೇಶವನ್ನು ಕಂದಾಯ ಇಲಾಖೆಯ ಟಿಪ್ಪಣಿ ಸಂಖ್ಯೆ:ಕಂಇ 89 ಆರ್‌ಇಹೆಚ್ 2017 ದಿನಾಂಕ:21/08/2017 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 517 ಆಕೋ–1/2017 ದಿನಾಂಕ:04/11/2017ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
06/06/19

(ಬಿ. ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ಕೃಭಾಜನಿ)
ಜಲ ಸಂಪನ್ಮೂಲ ಇಲಾಖೆ.

ಪ್ರತಿಯನ್ನು:

6/6/19

1. ಮಹಾಲೇಖಪಾಲರು, (ಎ & ಇ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ/ಉನ್ನತ ಶಿಕ್ಷಣ ಇಲಾಖೆ/ಕಾರ್ಮಿಕ ಇಲಾಖೆ/ಸಮಾಜ ಕಲ್ಯಾಣ ಇಲಾಖೆ/ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
4. ವಿಶೇಷಾಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಆರ್ಥಿಕ ಇಲಾಖೆ(ಲೋಇ–ಆಕೋ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ(ಸಚಿವ ಸಂಪುಟ), (ಪ್ರಕರಣ ಸಂಖ್ಯೆ:ಸಿ:246/2019ರಂತೆ ಮಾಹಿತಿಗಾಗಿ)
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
7. ಸರ್ಕಾರದ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
8. ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಜಸಂಇಲಾಖೆ, ವಿಕಾಸ ಸೌಧ, ಬೆಂಗಳೂರು.
9. ಸರ್ಕಾರದ ಉಪ ಕಾರ್ಯದರ್ಶಿಗಳು, ಕೃಭಾಜನಿ, ಜಲ ಸಂಪನ್ಮೂಲ ಇಲಾಖೆ.
10. ಶಾಖಾ ರಕ್ಷಕ ಕಡತ/ಹೆಚ್ಚಿನ ಪ್ರತಿಗಳು.